**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

# ಸಿ.ಸಿ. ಸಂಖ್ಯೆ 651/2023

ಚಾಸಾ ಃ **6**

ಪ್ರಾಸಾ ಃ **4**

| | |
|---|---|
| **ಹೆಸರು** | : ಮೊಣ್ಣಪ್ಪ ಕೆ ಪಿ |
| **ತಂದೆಯ ಹೆಸರು** | : ಲೇಟ್ ಪೊನ್ನಪ್ಪ ಕೆ ಬಿ |
| **ವಯಸ್ಸು** | : 29 ವರ್ಷ |
| **ಉದ್ಯೋಗ** | : ಖಾಸಗಿ ನೌಕರ |
| **ವಾಸಸ್ಥಳ** | : ಕೆದಮುಳ್ಳೂರು ಗ್ರಾಮ |

**ದಿನಾಂಕ ಃ 12-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

1. ನಾನು 2018 ರಿಂದ ಇಲ್ಲಿಯವರೆಗೂ ವಿರಾಜಪೇಟೆಯ ಅರಣ್ಯ ಇಲಾಖೆಯ ಹೆಗ್ಗಳ ಶಾಖೆಯಲ್ಲಿ ತಾತ್ಕಲಿಕ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 29-04-2021 ರಂದು ನನ್ನ ಮೇಲಾಧಿಕಾರಿಯವರಿಗೆ ಯಾರೋ ವ್ಯಕ್ತಿಗಳು ದೂರವಾಣಿ ಕರೆ ಮಾಡಿ ಕೆಲವೊಂದು ವ್ಯಕ್ತಿಗಳು ಬೇಟೆಯಾಡಿದ್ದಾರೆಂದು ತಿಳಿಸಿರುತ್ತಾರೆ. ನಾನು, ಚಾಸಾ1 ಹಾಗೂ 8 ರವರು ಅಲ್ಲಿಗೆ ರಾತ್ರಿ 1.45 ಗಂಟೆಗೆ ಪಾಲಂಗಾಲದಲ್ಲಿರುವ ಕೊಳ್ಳಚಂಡ ಗಣೇಶ್ ರವರ ಲೈನ್ ಮನೆಯ ಹತ್ತಿರ ಹೋಗಿ ನೋಡಲಾಗಿ, ಹಾರುವ ಅಳಿಲನ್ನು ಭೇಟೆಯಾಡಿ ಅರ್ಧ ಅಳಿಲನ್ನು ತಿಂದು, ಉಳಿದ ಅರ್ಧ ಮಾಂಸ ಹಾಗೂ ಚರ್ಮವನ್ನು ಲೈನ್ ಮನೆಯ ಪಕ್ಕದಲ್ಲಿ ಅವಿಸಿ ಇಟ್ಟಿರುತ್ತಾರೆ. ಅದನ್ನು ಚಾಸಾ1 ರವರು ಮಹಜರ ಕ್ರಮ ಜರುಗಿಸಿ, ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಆರೋಪಿಗಳನ್ನು ಹಾಗೂ ವಶಪಡಿಸಿಕೊಂಡ ವಸ್ತುಗಳೊಂದಿಂಗೆ ಕಛೇರಿಗೆ ಹಿಂತಿರುಗಿರುತ್ತೇವೆ. ಸದರಿ ಮಹಜರಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 5 ನ್ನು ನೋಡಿ ಗುರುತಿಸುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು

ಗೈರು ಹಾಜರಾಗಿದ್ದು, ಆರೋಪಿಗಳ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

3. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ2 ಡಿ ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯ.

**(ಈ ಹಂತದಲ್ಲಿ *ಸ. ಸ. ಅ.* ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

1. ಆರೋಪಿತರು 3 ನೇ ಆರೋಪಿಗೆ ಸೇರಿದ ಒಂಟಿ ನಳಿಕೆಯ ಕೋವಿಯನ್ನು ಕೃತ್ಯಕ್ಕೆ ಬಳಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಾಲ್ಕು ಭಾವಚಿತ್ರಗಳನ್ನು ತೋರಿಸಿ, ಅದರಲ್ಲಿ ಕಾಣುತ್ತಿರುವ ಕೋವಿ ಕೃತ್ಯಕ್ಕೆ ಬಳಸಿದ ಕೋವಿ ಎಂದು ಕೇಳಿದಾಗ ಸಾಕ್ಷಿಯು ಹೌದು ಎಂದು ಒಪ್ಪಿದ ಮೇರೆಗೆ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ3 ರಲ್ಲಿ ಕಾಣುತ್ತಿರುವ ಬೇಟೆ ಆಡಿದ ಅಳಿಲು ನೋಡಿ ಗುರುತಿರುತ್ತಾರೆ.

ಪಾಟಿ ಸವಾಲು ಮುಕ್ತಾಯ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ವಿ ಜಿ ಆರ್ ವಕೀಲರಿಂದಃ-**

1. ನಾನು ದಿನಾಂಕ 29-04-2021 ರಂದು ಹೆಗ್ಗಳ ಶಾಖೆಯ ಪಾಲಂಗಾಲ ಗ್ರಾಮದಲ್ಲಿ ಗಸ್ತು ಕರ್ತವ್ಯದಲ್ಲಿದ್ದೆ. ಚಾಸಾ1 ರವರು ನನಗೆ ಮಧ್ಯಾರಾತ್ರಿ 12.30 ಗಂಟೆಗೆ ಕರೆಯನ್ನು ಮಾಡಿರುತ್ತಾರೆ. ನಾನು ಗಸ್ತುನಲ್ಲಿದ್ದ ಸ್ಥಳದಿಂದ ಕೃತ್ಯ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಗಸ್ತುನಲ್ಲಿದ್ದಾಗ ನನ್ನ ಜೊತೆ ಚಾಸಾ8 ರವರು ಇದ್ದರು. ನಮ್ಮ ಸ್ವಂತ ವಾಹನದಲ್ಲಿ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇವೆ. ಚಾಸಾ1 ಹಾಗೂ ಇತರರು ವಿರಾಜಪೇಟೆ ಕಛೇರಿಯಿಂದ ಕೃತ್ಯ ಸ್ಥಳಕ್ಕೆ ಬೆಳಗಿನ ಜಾವ 4.00 ಗಂಟೆಗೆ ಬಂದಿರುತ್ತಾರೆ. ಗ್ರಾಮಸ್ಥರು ಮೇಲಾಧಿಕಾರಿಗಳಿಗೆ ಲೈನ್ ಮನೆಯ ವಿಚಾರ ತಿಳಿಸಿರುತ್ತಾರೆ.

2. ಆರೋಪಿ 1 ಹಾಗೂ 2 ರವರು ಲೈನ್ ಮನೆಯಲ್ಲಿ ಇದ್ದರು. ಕೃತ್ಯ ಸ್ಥಳದಲ್ಲಿ ಮಹಜರ ಕ್ರಮ ಜರುಗಿಸಿರುತ್ತಾರೆ. ಮಹಜರ ಕ್ರಮ ಜರುಗಿಸಿ ಮಾಂಸ, ಕೋವಿ, ಕತ್ತಿ ಹಾಗೂ ತೋಟ ವಶಪಡಿಸಿಕೊಂಡಿರುತ್ತಾರೆ. ಒಂದು ತೋಟ ವಶಕ್ಕೆ ಪಡೆದುಕೊಂಡಿರುತ್ತಾರೆ. ಮಹಜರನ್ನು 2 ಗಂಟೆಗೆ ಜರುಗಿಸಿರುತ್ತಾರೆ. ವಶಕ್ಕೆ ಪಡೆದುಕೊಂಡ ಒಂದು ತೋಟ ಖಾಲಿ ಅಥವಾ ಜೀವಂತ ತೋಟ ಎಂದು ಕೇಳಿದಾಗ ಸಾಕ್ಷಿಯು ಜೀವಂತ ತೋಟ ಎನ್ನುತ್ತಾರೆ. ಈ ಕುರಿತು ಮಹಜರಿನಲ್ಲಿ ನಮೂದು ಮಾಡಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ನಾಲ್ಕು ತೋಟವನ್ನು ತೋರಿಸಿ ಅದರಲ್ಲಿ ಯಾವ ತೋಟ ವಶಪಡಿಸಿಕೊಂಡಿರುತ್ತಾರೆಂದು ಕೇಳಿದಾಗ ಸಾಕ್ಷಿಯು ಕೆಂಪು ಬಣ್ಣದ ತೋಟವನ್ನು ತೋರಿಸಿ ಈ ತೋಟವನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ತೋಟಕ್ಕೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮೂರು ತೋಟಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿ.

3. ಸಾಕ್ಷಿಗೆ ನಿಪಿ 3 ನ್ನು ತೋರಿಸಿ ಅದು ಅರಣ್ಯ ಇಲಾಖೆಯ ಕಛೇರಿಯಲ್ಲಿ ಭಾವಚಿತ್ರ ತೆಗೆಯಲಾಗಿದೆ ಎಂದರೆ ಸರಿ. ನಿಪಿ2 ಮಹಜರನ್ನು ನಮ್ಮ ಕಛೇರಿಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಮು ಮಾಲುಗಳಿಗೆ ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿರುವುದಿಲ್ಲ. ಮು ಮಾ 1 ರಿಂದ 5 ಕೃತ್ಯ ಸ್ಥಳದಲ್ಲಿ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಳಿಯಲ್ಲಿ ಭಾಗಿಯಾಗಿರುವುದಿಲ್ಲ, ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ಯಾವುದೇ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ.

ಪಾಟಿ ಸವಾಲು ಮುಕ್ತಾಯ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.